೨

ಭಾಷಾ ಶಿಕ್ಷಕರಿಗೆ ಬಹುಭಾಷಿಕತೆ ಹಾಗೂ ದ್ವಿಭಾಷಿಕತೆ

– ಆಶಾ ಅಯ್ಯರ್

ಸಾರಾಂಶ: ಮಕ್ಕಳ ಭಾಷಾ ಕಲಿಕೆಯ ಪ್ರಕ್ರಿಯೆಯಲ್ಲಿ ಬಹುಭಾಷಿಕತೆಯು ಒಂದು ಅದ್ಭುತ ಸಂಪನ್ಮೂಲವಾಗಬಹುದೆಂದು ಈ ಲೇಖನವು ಪ್ರತಿಪಾದಿಸುತ್ತದೆ. ಪ್ರಾಥಮಿಕ ಹಂತದ ಒಂದನೇ ತರಗತಿಯೊಂದರಲ್ಲಿ ಲೇಖಕರು ವಿವಿಧ ಭಾಷೆಗಳ ಹಿನ್ನೆಲೆಗಳಿಂದ ಬಂದಂತಹ ವಿದ್ಯಾರ್ಥಿಗಳಿಗೆ ಭಾಷೆಯೊಂದನ್ನು ಕಲಿಸುವಾಗ ಎದುರಾಗುವ ಸವಾಲುಗಳು ಹಾಗೂ ವಿದ್ಯಾರ್ಥಿಗಳ ಮಾತೃಭಾಷೆಗಳನ್ನು ಉಪಯೋಗಿಸಿಕೊಳ್ಳುತ್ತಲೇ ಹಿಂದಿ ಭಾಷಾ ಕಲಿಕೆಯನ್ನು ಹೇಗೆ ಪರಿಣಾಮಕಾರಿ ಯಾಗಿ ಮಾಡಬಹುದೆಂಬುದನ್ನು ಈ ಲೇಖನವು ತಿಳಿಸುತ್ತದೆ. ಇದು ಹಿಂದಿ ಭಾಷಾ ಶಿಕ್ಷಕಿಯೊಬ್ಬರ ಅನುಭವದ ಮೂಸೆಯಿಂದ ಬಂದ ಒಳನೋಟವಾದರೂ, ಇತರ ಬಹುಭಾಷಿಕ ಪರಿಸರವಿರುವ ತರಗತಿಗಳಲ್ಲೂ ಹಲವು ಸಾಧ್ಯತೆಗಳನ್ನು ಅನ್ವೇಷಿಸಲು ಪ್ರೇರೇಪಿಸುತ್ತದೆ. ಅದಲ್ಲದೆ ಬಹುಭಾಷಿಕ ಹಿನ್ನೆಲೆಯಿಂದ ಬಂದ ಮಕ್ಕಳೊಡನೆ ತೊಡಗಿಸಿಕೊಳ್ಳುವ ಶಿಕ್ಷಕರು ರೂಢಿಸಿಕೊಳ್ಳಬೇಕಾದ ಮನೋಧೋರಣೆ ಮತ್ತು ಕೈಗೊಳ್ಳಬಹುದಾದ ಚಟುವಟಿಕೆಗಳನ್ನೂ ಲೇಖನವು ನಮ್ಮ ಮುಂದಿಡುತ್ತದೆ.

ಪ್ರಮುಖ ಪದಗಳು: ಬಹುಭಾಷಿಕತೆ– **multilingualism-multilingual,** ಬಹುಭಾಷಿಕ ತರಗತಿ ನಿರ್ವಹಣೆ– **classroom management multilingual,** ಮಕ್ಕಳ ಭಾಷೆಯ ಸಂಪನ್ಮೂಲ– **language of the children as resource,** ಭಾಷೆ ಒಂದು ಪ್ರಭಾವಶಾಲಿ ಅಸ್ತ್ರ– **language becomes impressive tool,** ಪೂರ್ವಜ್ಞಾನ ಅಡಚಣೆ– **prior knowledge is obstacle,** ಭಾಷೆಯನ್ನು ಜನಪ್ರಿಯಗೊಳಿಸುವುದು ಪರಸ್ಪರ ರೀತಿಯಲ್ಲಿ– **popularising language is a two-way affair,** ಬಹು ಭಾಷಿಕತೆ ಒಂದು ಅದ್ಭುತ ಸಂಪನ್ಮೂಲ– **multilingualism as resource.**

ಪ್ರಸ್ತಾವನೆ

ಇತರ ವಿಷಯಗಳನ್ನು ಕಲಿಸುವ ಶಿಕ್ಷಕರಲ್ಲದೆ ಹೋದರೂ, ಭಾಷಾ ಶಿಕ್ಷಕರು ಎರಡು ಇಲ್ಲವೆ ಹೆಚ್ಚಿನ ಭಾಷೆಗಳನ್ನು ಚೆನ್ನಾಗಿಯೇ ನಿಭಾಯಿಸಬಲ್ಲರು. ಕೇಂದ್ರೀಯ ವಿದ್ಯಾಲಯ ಶಾಲೆಗಳೂ ಒಳಗೊಂಡಂತೆ, ಬಹುಪಾಲು ಸಿಬಿಎಸ್‌ಸಿ ಪಠ್ಯಕ್ರಮ ಅನುಸರಿಸುವ ಶಾಲೆಗಳಲ್ಲಿ, ಬೋಧನಾ ಮಾಧ್ಯಮವು ಇಂಗ್ಲಿಷ್ ಆಗಿರುತ್ತದೆ. ಆದಕಾರಣ, ತರಗತಿ ಕಲಿಕಾ ಪ್ರಕ್ರಿಯೆ ದೃಷ್ಟಿಯಿಂದ ಮಕ್ಕಳಿಗೆ ಸುಲಲಿತವಾಗಿ ಕಲಿಸಲು ಹಾಗೂ ಮಕ್ಕಳ ಮತ್ತು ಶಿಕ್ಷಕರ ಮಾನಸಿಕ ಅನುಕೂಲತೆಯ ದೃಷ್ಟಿಯಿಂದ, ಇಂಗ್ಲಿಷ್‌ನ ಜೊತೆ ಶಾಲೆಯಲ್ಲಿ ಹೇಳಿಕೊಡಲಾಗುವ ಇನ್ನಿತರ ಭಾಷೆ ಅಥವಾ ಮಕ್ಕಳು ಪ್ರತಿನಿಧಿಸುವ ಭಾಷೆಗಳನ್ನೂ ಶಾಲೆಗಳಲ್ಲಿ ಉಪಯೋಗಿಸುವುದು ಲಾಭದಾಯಕವಾಗಿರುತ್ತದೆ. ಶಿಕ್ಷಕಿಯೊಬ್ಬಳು ಮಕ್ಕಳ ಭಾಷೆಯನ್ನು ಒಂದು ಸಂಪನ್ಮೂಲವಾಗಿ ನೋಡದೆ ಹೋದಲ್ಲಿ, ಆಕೆಗೆ ಮಕ್ಕಳು ತಿಳಿದಿರುವುದನ್ನು ಅರಿಯಲು ಮತ್ತು ತರಗತಿ ಬೋಧನೆಯನ್ನು ಪರಿಣಾಮಕಾರಿ ಮಾಡಲು ಸಾಧ್ಯವಾಗುವುದಿಲ್ಲ.

ಹೀಗೆ ಮಾಡುವ ಅಗತ್ಯವೇನು?

ಮೊದಲನೇ ತರಗತಿಯಲ್ಲಿರುವ ಮಕ್ಕಳಿಗೆ ತಮ್ಮ ಮಾತೃಭಾಷೆಯ ಜ್ಞಾನ ಚೆನ್ನಾಗಿರುತ್ತದೆ. ಯಾವ ರಾಜ್ಯವೆಂಬುದನ್ನು ಆಧರಿಸಿ, ಒಂದು ತರಗತಿಯಲ್ಲಿ ೪–೬ ಭಾಷಾ ಗುಂಪುಗಳು ಕೂಡಾ ಇರುತ್ತವೆ. ನಾನಿಲ್ಲಿ ಇದನ್ನು ಕುರಿತಾಗಿ ಹೆಚ್ಚು ವಿವರಣೆ ಕೊಡುತ್ತೇನೆ.

> ಮಕ್ಕಳ ಭಾಷೆಯನ್ನು ಒಂದು ಸಂಪನ್ಮೂಲವಾಗಿ ನೋಡದೆ ಹೋದಲ್ಲಿ, ಆಕೆಗೆ ಮಕ್ಕಳು ತಿಳಿದಿರುವುದನ್ನು ಅರಿಯಲು ಮತ್ತು ತರಗತಿ ಬೋಧನೆಯನ್ನು ಪರಿಣಾಮಕಾರಿ ಮಾಡಲು ಸಾಧ್ಯವಾಗುವುದಿಲ್ಲ.

ರಾಜ್ಯಗಳಲ್ಲಿ, ಒಂದು ತರಗತಿಯಲ್ಲಿ ಆ ರಾಜ್ಯದ ಸ್ಥಳೀಯ ಭಾಷೆಯನ್ನು ಮಾತನಾಡುವ ಕೆಲವು ಮಕ್ಕಳು ಇರುತ್ತಾರೆ ಹಾಗೂ ಅವರು ಬೇರೆ ಕೆಲವು ಭಾಷೆಗಳನ್ನೂ ಆಡುತ್ತಾರೆ. ಉದಾ: ತಮಿಳುನಾಡಿನಲ್ಲಿ ತಮಿಳು ಭಾಷೆ ಹಾಗೂ ಆ ರಾಜ್ಯದೊಳಗಿನ ಇನ್ನಿತರ ಭಾಷೆಗಳನ್ನು ಬಲ್ಲ ಮಕ್ಕಳು ಇರಲು ಸಾಧ್ಯ. ಹಾಗೆಯೇ ಪಶ್ಚಿಮ ಬಂಗಾಳದಲ್ಲಿ ಬಾಂಗ್ಲಾ ಹಾಗೂ ಆ ರಾಜ್ಯದೊಳಗಿನ ಬೇರೆ ಭಾಷೆಗಳನ್ನು, ಮತ್ತು ಮಹಾರಾಷ್ಟ್ರದಲ್ಲಿ ಮರಾಠಿ ಮತ್ತು ಇನ್ನಾವುದೋ ಭಾಷೆಗಳನ್ನು ಬಲ್ಲವರು ಇರುತ್ತಾರೆ. ಆ ರಾಜ್ಯಗಳ ಎರಡನೇ ಭಾಷೆಯ ಗುಂಪು ಎಂಬುದು ಸಾಮಾನ್ಯವಾಗಿ ನೆರೆಹೊರೆಯ ರಾಜ್ಯಗಳ ಭಾಷೆಗಳಾಗಿರಬಹುದು. ಮಧ್ಯಪ್ರದೇಶದ ನೇಪಾನಗರ್

ಅಥವಾ ಬುರಹಾನ್‌ಗಳಲ್ಲಿ ಹತ್ತಿರದ ಮಹಾರಾಷ್ಟ್ರದ ಮರಾಠಿ ಭಾಷಿಕರ ಗುಂಪು, ಚತ್ತೀಸಗಢದಲ್ಲಿ ಒರಿಯಾ ಗುಂಪು, ಅಥವಾ ಪಂಜಾಬಿನಲ್ಲಿ ಹಿಂದಿ ಗುಂಪು ಅಥವಾ ಪಂಜಾಬೀ ಜೊತೆಗೆ ಹರ್ಯಾಣವಿ ಗುಂಪು ಇರುವ ಸಾಧ್ಯತೆ ಇದೆ.

ಇಂತಹ ಸಂದರ್ಭಗಳಲ್ಲಿ ಶಿಕ್ಷಕಿಯೊಬ್ಬರಿಗೆ ಅಲ್ಲಿರುವ ಭಾಷೆಗಳನ್ನು ಕುರಿತು ಮೂಲಭೂತ ಜ್ಞಾನವಿದ್ದಲ್ಲಿ, ಅವರು ಬಹಳ ಉತ್ತಮವಾಗಿ ವಿದ್ಯಾರ್ಥಿಗಳೊಡನೆ ತೊಡಗಿಸಿಕೊಳ್ಳಬಹುದು. ಮಗುವೊಂದರ ಜೊತೆ ಅದರದ್ದೇ ಭಾಷೆಯಲ್ಲಿ ವ್ಯವಹರಿಸುವುದು ಸುಲಭವಾಗಿರುತ್ತದೆ. ಶಿಕ್ಷಕಿಯೊಬ್ಬರು ಮಕ್ಕಳ ಮಾತೃಭಾಷೆಯಲ್ಲಿ ಸರಳವಾಗಿ ಕೆಲವು ಮಾತುಗಳನ್ನಾಡಿದಾಗ, ಮಕ್ಕಳಿಗೆ, ಅದರಲ್ಲೂ ಪ್ರಾಥಮಿಕ ತರಗತಿಯಲ್ಲಿರುವವರಿಗೆ, ಶಿಕ್ಷಕರು ತಮಗೆ ಹತ್ತಿರದವರೆಂದು ಅನಿಸುತ್ತದೆ. ಆಗ ಭಾಷೆಯೆಂಬುದು ಒಂದು ಪ್ರಭಾವಶಾಲಿ ಅಸ್ತ್ರವಾಗಲು ಸಾಧ್ಯವಾಗುತ್ತದೆ.

ಪ್ರಾಥಮಿಕ ತರಗತಿಗಳಲ್ಲಿ ಇಂಗ್ಲಿಷ್‌ನಂತಹ ಹೊರಗಿನ ಭಾಷೆಯೊಡನೆ ಹೊಂದಿಕೊಳ್ಳಲು ಮಕ್ಕಳಿಗೆ ಕಷ್ಟವೆನಿಸುತ್ತದೆ. ನಮ್ಮ ಬಹುಪಾಲು ಮಕ್ಕಳಿಗೆ ಆಂಗ್ಲಭಾಷೆಯಲ್ಲಿ ಸಂವಹಿಸುವುದು ಸುಲಭವಲ್ಲ. ಶಿಕ್ಷಕರು ಮಕ್ಕಳೊಂದಿಗೆ ಅವರದೇ ಭಾಷೆಯಲ್ಲಿ ಮಾತಾಡಿದಾಗ, ಅಥವಾ ಪರಿಚಿತವಾದ ಕೆಲವು ಪದಗಳನ್ನು ಬಳಸಿದಾಗ, ಮಕ್ಕಳು ನಿರಾಳವಾಗುತ್ತಾರೆ. ಮಕ್ಕಳ ಮಾತೃಭಾಷೆಯನ್ನು ಕುರಿತು ಕೀಳಾಗಿ ಮಾತನಾಡುವುದು, ಇಲ್ಲವೆ ಅಣಕ ಮಾಡುವುದನ್ನು ಯಾವತ್ತೂ ಮಾಡಬಾರದು ಎಂಬುದನ್ನು ನಾವು ಬಹಳ ಮುಖ್ಯವಾಗಿ ಗಮನಿಸಬೇಕು. ಅವರ ಭಾಷೆಯನ್ನು ಕುರಿತು ನೀವು ನಕ್ಕರೆ, ನಿಮ್ಮನ್ನೂ ಹಾಗೂ ನೀವು ಕಲಿಸಲು ಹೊರಟಿರುವ ವಿಷಯವನ್ನೂ ಅವರು ಎಂದೆಂದಿಗೂ ದ್ವೇಷಿಸುವಂತಾಗುತ್ತದೆ.

ಅದು ಹೇಗೆ ಸಹಾಯಕಾರಿ?

ಮಹಾರಾಷ್ಟ್ರವನ್ನು ನಾನಿಲ್ಲಿ ಉದಾಹರಣೆಯಾಗಿ ತೆಗೆದುಕೊಂಡಿದ್ದೇನೆ. ಕಾರಣ, ನನ್ನ ಬೋಧನಾ ಅನುಭವವು ಬಹುತೇಕ ಮಹಾರಾಷ್ಟ್ರದ ಎರಡು ಕೇಂದ್ರೀಯ ವಿದ್ಯಾಲಯಗಳಲ್ಲಿ, ಅಂದರೆ ಭುಸವಾಲ್ ಹಾಗೂ ನೇಪಾನಗರ್‌ಗಳಲ್ಲಿ ಆಗಿದೆ. ನೇಪಾನಗರ್ ಮಹಾರಾಷ್ಟ್ರ ಹಾಗೂ ಮಧ್ಯಪ್ರದೇಶಗಳ ಗಡಿಯಲ್ಲಿದೆ. ನಾನು ಇಲ್ಲಿ ಕೆಲಸ ಮಾಡುವಾಗ ಮಕ್ಕಳು ತಮ್ಮ ಸ್ನೇಹಿತರರೊಡನೆ ಹಿಂದಿಯಲ್ಲಿ ಮಾತನಾಡಿದರೂ ಮರಾಠಿ ಪದಗಳನ್ನು ಬಳಸುವುದನ್ನು ಗಮನಿಸಿದೆ. ಅವರ ಮಾತಿನ ಧ್ವನಿ ಹಾಗೂ ಅಭಿವ್ಯಕ್ತಿಯ ರೂಪಗಳಲ್ಲಿಯು ಮರಾಠಿಯ ಛಾಯೆ ದಟ್ಟವಾಗಿರುವುದನ್ನು ನೋಡಿದ್ದೇನೆ. ಆಶ್ಚರ್ಯಕರ ಸಂಗತಿಯೆಂದರೆ, ಅವರಲ್ಲಿ

ಹಲವರ ಮಾತೃಭಾಷೆ ಮರಾಠಿ ಅಗಿರಲಿಲ್ಲ! ಆದರೆ ಅವರು ಹಿಂದಿಯಲ್ಲಿ ಮಾತನಾಡಲು ಪ್ರಯತ್ನಿಸುವಾಗ ಮುಂದೆ ಕೊಟ್ಟಂತಹ ಅಭಿವ್ಯಕ್ತಿಗಳನ್ನು ಬಳಸುವುದನ್ನು ಕೇಳಿದ್ದೇನೆ.

೧. ಯೇ ಮೇರಾಯೀಚ್ ಹೈ

ಇದು ನನ್ನದು ಮಾತ್ರ ಆಗಿದೆ.

ಇದು ನನ್ನದೇ.

ಇದನ್ನು ಹಿಂದಿಯಲ್ಲಿ ಹೀಗೆ ಬಳಸಲಾಗುವುದು – ಯೇ ಮೇರಾ ಹೀ ಹೈ. ಮೇರಾಯೀಚ್ ಎಂಬ ಬಳಕೆ ಮರಾಠಿ ಪ್ರಭಾವದಿಂದ ಬಂದದ್ದು.

೨. ಕಾಯ್ಕೋ ರೇ!

ಯಾಕೊ?

ಯಾಕೇ?

'ಕಾಯ್ಕೋ' ಎಂಬುದನ್ನು ಮರಾಠಿಯಲ್ಲಿ ಅನೌಪಚಾರಿಕವಾಗಿ ಮಾತನಾಡುವಾಗ ಬಳಸುತ್ತಾರೆ. ಮಕ್ಕಳು ಬರೆಯುವಾಗ ಕಾಗುಣಿತದ ಭಾಗವಾದ ಮಾತ್ರೆಗಳನ್ನು ಬಳಸುವುದರಲ್ಲಿ (ಸ್ವರಗಳನ್ನು ಯಾವ ರೀತಿ ಹಾಗೂ ಎಷ್ಟು ಸಮಯದಲ್ಲಿ ಉಚ್ಚರಿಸಬಹುದು ಎಂಬುದನ್ನು ಇದು ಸೂಚಿಸುತ್ತದೆ) ಹಲವಾರು 'ತಪ್ಪುಗಳನ್ನು' ಮಾಡಿರುವುದನ್ನು ಸಹ ನಾನು ಗಮನಿಸಿದೆ. ಅದು ವಿಶೇಷವಾಗಿ, 'ಈ' ಹಾಗೂ 'ಉ'ಗಳ ಹ್ರಸ್ವ ಹಾಗೂ ದೀರ್ಘ ಸ್ವರಗಳ ಉಪಯೋಗದಲ್ಲಿ ಆಗುವ ವ್ಯತ್ಯಾಸವಾಗಿದೆ. ಭಾಷಾ ಶಿಕ್ಷಕರು ಇವುಗಳನ್ನು ತಿದ್ದುವ ಮೊದಲು ಯಾಕೆ ಹೀಗಾಗುತ್ತಿದೆ ಎಂದು ತಿಳಿದುಕೊಳ್ಳಬೇಕು. ಹಲವಾರು ಮಕ್ಕಳ ಬರವಣಿಗೆಗಳನ್ನು ನಾನು ಗಮನಿಸಿ ಈ ವಿಚಾರವನ್ನು ಕಂಡುಕೊಂಡೆ. ದೀರ್ಘಾಕ್ಷರವನ್ನು ಬಳಸಬೇಕಾದಲ್ಲಿ ಹ್ರಸ್ವಾಕ್ಷರ ಬರೆದಿರುವುದನ್ನು ಮತ್ತು ಹ್ರಸ್ವಾಕ್ಷರ ಬರೆಯಬೇಕಾದಲ್ಲಿ ದೀರ್ಘದ ಬಳಕೆಯನ್ನು ನೋಡಿದೆ. ಹಿರಿಯರು ಮಾತನಾಡುವ ಶೈಲಿಯನ್ನು ನಾನು ಬಹಳ ಹತ್ತಿರದಿಂದ ಗಮನಿಸಿದಾಗ, ಅವರೂ ಸಹ ಹಾಗೆಯೇ ಉಚ್ಚರಿಸುತ್ತಿದ್ದುದನ್ನು ನೋಡಿದೆ. ಇವೆಲ್ಲವೂ ಕಲಿಕೆಯ ಪ್ರಕ್ರಿಯೆಯಲ್ಲಿ ಆಗುವ 'ತಪ್ಪುಗಳು' ಹಾಗೂ ಇವನ್ನು ಮಕ್ಕಳು ಕಾಲಕ್ರಮೇಣ ತಿದ್ದಿಕೊಂಡು ಸರಿಯಾಗಿ ಬರೆಯುವುದನ್ನು ಕಲಿಯುತ್ತಾರೆ ಎಂಬುದನ್ನು ನಾವು ತಿಳಿಯಬೇಕು. ಆದ್ದರಿಂದ ನಾವು ಯಾವುದನ್ನು ತಪ್ಪೆಂದು ಪರಿಗಣಿಸಿ ಮಕ್ಕಳನ್ನು ಶಿಕ್ಷಿಸುತ್ತೇವೋ ಅವು, ಮಕ್ಕಳ ಪರಿಸರದಲ್ಲಿ ಬಳಸುವ ಭಾಷೆಗಳ ಬಗೆಯಿಂದ ಉಂಟಾಗುತ್ತದೆ. ಹಾಗೂ ಅವರು ತಮ್ಮ ಪರಿಸರದಿಂದ ಯಾವ ರೀತಿಯಲ್ಲಿ ಭಾಷೆಯನ್ನು ಕಲಿಯುತ್ತಿದ್ದಾರೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ.

ಹಾಗಿರುವಾಗ ನಾನು ಏನು ಮಾಡಿದೆ?

ನಾನು ಮರಾಠಿ ಮಾತನಾಡುವ ಮಗುವಿನ ಪೋಷಕರೊಬ್ಬರನ್ನು ಹುಡುಕಿಕೊಂಡು ಈ ಸಮಸ್ಯೆಯ ಬಗ್ಗೆ ಚರ್ಚಿಸಿದೆ. ಇವೆಲ್ಲವೂ ತಪ್ಪಾದ ದೀರ್ಘ ಸ್ವರವನ್ನು (ವಿಲಂತಿಯನ್ನು– ಮಾತ್ರಾದ ಮರಾಠಿ ಪದ) ಬಳಸುವುದರಿಂದ, ಅಂದರೆ ಮಾತ್ರೆಯಿಂದ ಆಗುತ್ತದೆ ಎಂದು ಅವರು ಹೇಳಿದರು. ಆದುದರಿಂದ 'ಹಿಂದು' ಎಂಬ ಪದವನ್ನು, ಹಿಂದಿಯಲ್ಲಿ 'ಹಿಂದೂ' ಎಂದು, ಮರಾಠಿಯಲ್ಲಿ 'ಹೀಂದು' ಎಂದು ಉಚ್ಚರಿಸಲಾಗುತ್ತದೆ (ಹ್ರಸ್ವ 'ಇ' ದೀರ್ಘವಾಗಿ, ದೀರ್ಘ 'ಊ' ಹ್ರಸ್ವವಾಗಿ ಉಪಯೋಗಿಸಲಾಗುತ್ತದೆ). ಅಂತೆಯೇ ಮಕ್ಕಳು ಹಿಂದಿಯಲ್ಲಿ ಬರೆಯುವಾಗ ಹೀಂದು ಎಂದು ಬರೆಯುತ್ತಿದ್ದರು. ಆದರೆ ನಾವು ನೆನಪಿನಲ್ಲಿಡಬೇಕಾದ ವಿಚಾರವೆಂದರೆ ಅಂತಿಮವಾಗಿ, ನಾವು ಹಿಂದಿಯಲ್ಲಿ ಹೇಗೆ ಮಾತನಾಡುತ್ತೇವೋ ಹಾಗೆಯೇ ಬರೆಯಲು ಅವರಿಗೆ ಹೇಳುತ್ತೇವೆ ಅಲ್ಲವೆ?!

ಇದನ್ನು ಕುರಿತು ಯೋಚಿಸಿ ನಾನು ಒಂದು ಸರಳ ಪರಿಹಾರವನ್ನು ಕಂಡುಕೊಂಡೆ. ಇದು ಬಹುಶಃ ಬಾಲಿಶವೆನಿಸಿದರೂ, ಪರಿಣಾಮಕಾರಿಯಾಗಿ ಕೆಲಸ ಮಾಡಿತು. ಹ್ರಸ್ವ ಹಾಗೂ ದೀರ್ಘ ಸ್ವರಗಳನ್ನು ಅದಲು ಬದಲಾಗಿ ಉಪಯೋಗಿಸಲು ಅವರಿಗೆ ಹೇಳಿದೆ. 'ಇ' ಉಪಯೋಗಿಸುವಲ್ಲಿ 'ಈ' ಮತ್ತು 'ಈ' ಬಳಸುವಲ್ಲಿ 'ಇ' ಎಂದು, 'ಉ' ಉಪಯೋಗಿಸುವಲ್ಲಿ 'ಊ' ಮತ್ತು 'ಊ' ಬಳಸುವಲ್ಲಿ 'ಉ' ಎಂದು ಬಳಸಲು ಪ್ರಾರಂಭಿಸಿದರು. ಸ್ವಲ್ಪ ಸಮಯ ಮತ್ತು ಪ್ರಯತ್ನದ ಅನಂತರ ಇದು ಅವರಿಗೆ ಅಭ್ಯಾಸವಾಯಿತು.

> ಮಕ್ಕಳ ಮಾತೃಭಾಷೆಯ ಕುರಿತು ಕೀಳಾಗಿ ಮಾತನಾಡುವುದನ್ನು, ಇಲ್ಲವೆ ಅಣಕ ಮಾಡುವುದನ್ನು ಯಾವತ್ತೂ ಮಾಡಬಾರದು ಎಂಬುದನ್ನು ನಾವು ಬಹಳ ಮುಖ್ಯವಾಗಿ ಗಮನಿಸಬೇಕು. ಅವರ ಭಾಷೆಯನ್ನು ಕುರಿತು ನೀವು ನಕ್ಕರೆ, ನಿಮ್ಮನ್ನೂ ಹಾಗೂ ನೀವು ಕಲಿಸಲು ಹೊರಟಿರುವ ವಿಷಯವನ್ನೂ ಅವರು ಎಂದೆಂದಿಗೂ ದ್ವೇಷಿಸುವಂತಾಗುತ್ತದೆ.

ಹಿಂದಿಯಲ್ಲಿ ಮಹಾಪ್ರಾಣಗಳು

ಈಗ ಒಂದನೇ ತರಗತಿಯಲ್ಲಿರುವ ತಮಿಳು ಮಾತನಾಡುವ ಮಗುವನ್ನು ಗಮನಿಸೋಣ. ಆ ಮಗುವಿಗೆ ಹಿಂದಿ ಹೊಸ ಭಾಷೆಯಾಗಿದೆ, ಇಲ್ಲವೇ ಕೆಲವು ಹಿಂದಿ ಪದಗಳನ್ನು ಈಗಷ್ಟೇ ಕಲಿತಿರಬಹುದು. ಹಿಂದಿ ಶಿಕ್ಷಕಿ ಈ ಮಗುವಿಗೆ ಹಿಂದಿಯ ಮಹಾಪ್ರಾಣಗಳನ್ನು ಹೇಳಿಕೊಡುವುದು ಹೇಗೆ? ಮಹಾಪ್ರಾಣಗಳನ್ನು

ಹೆಚ್ಚು ಒತ್ತು ನೀಡಿ ಹೇಳಬೇಕಾಗುತ್ತದೆ. ಉದಾ: 'ಕಾನಾ' ಅಂದರೆ 'ಒಕ್ಕಣ್ಣ' ಎಂಬ ಪದಕ್ಕೂ 'ಖಾನಾ' ಅಂದರೆ ಊಟ ಎಂಬ ಪದಕ್ಕೂ ಇರುವ ವ್ಯತ್ಯಾಸವನ್ನು ಗಮನಿಸಬಹುದು. ತಮಿಳಿನಲ್ಲಿ ಮಹಾಪ್ರಾಣಗಳಿಲ್ಲ. ಮಹಾಪ್ರಾಣಕ್ಕೆ ಬಾಯಲ್ಲಿ ಹೆಚ್ಚು ಉಸಿರನ್ನು ಬಳಸಿ ಉಚ್ಚರಿಸಿದರಷ್ಟೇ ಸಾಕೆಂದು ತಿಳಿದ ಶಿಕ್ಷಕಿಗೆ ಇದನ್ನು ಮಕ್ಕಳಿಗೆ ಕಲಿಸಲು ಸುಲಭವಾಗುತ್ತದೆ. ಈ ಸಂದರ್ಭದಲ್ಲಿ, ಪ್ರಾಥಮಿಕ ಹಂತದಲ್ಲೇ ಇದನ್ನು ಕಲಿಸುವುದು ಉಪಯೋಗಕಾರಿಯಾಗುತ್ತದೆ. ಕಾರಣ, ಎಳವೆಯಲ್ಲಿ ಯಾವ ರೀತಿಯಲ್ಲಿ ಮಾತನಾಡುವುದನ್ನು ಅಭ್ಯಾಸ ಮಾಡಿಕೊಳ್ಳುತ್ತೇವೋ ಅದೇ ರೀತಿಯಲ್ಲಿ ನಾಲಗೆ ಹಾಗೂ ಬಾಯಿಯ ಇತರ ಭಾಗಗಳು ಉಚ್ಚಾರಣೆಗೆ ಒಗ್ಗಿ ಬಿಡುತ್ತವೆ. ಅನಂತರ ಉಚ್ಚಾರಣೆಯನ್ನು ತಿದ್ದುವುದು ಬಹಳ ಕಷ್ಟಕರವಾಗುತ್ತದೆ. ಹೊಸ ಉಚ್ಚಾರಣೆಯನ್ನು ಅಳವಡಿಸಿಕೊಳ್ಳಲು ನಮ್ಮ ಮೆದುಳು ಸಹ ನಿರಾಕರಿಸುತ್ತದೆ. ಪ್ರಾಥಮಿಕ ಹಂತದ ಮೊದಲ ಎರಡು ತರಗತಿಗಳಲ್ಲಿ ಈ ಅಭ್ಯಾಸವನ್ನು ಮಾಡಿಸುವುದು ಉತ್ತಮ ಫಲಿತಾಂಶವನ್ನು ಕೊಡಬಹುದು.

ಪೂರ್ವಜ್ಞಾನ

ಪೂರ್ವಜ್ಞಾನವು ಹೊಸ ಭಾಷೆಯ ಕಲಿಕೆಯಲ್ಲಿ ಅಡಚಣೆ ಉಂಟು ಮಾಡುವುದನ್ನು ನಾವು ನಮ್ಮ ಬಿಎಡ್ ದಿನಗಳಿಂದಲೂ ಬಲ್ಲೆವು. ಮಗುವೊಂದು ಮಾತನಾಡುವುದನ್ನು ಕಲಿತ ದಿನದಿಂದ ಪಡೆದುಕೊಂಡ ಭಾಷೆಯು ಹೊಸದೊಂದು ಭಾಷೆಯನ್ನು ಕಲಿಯುವಲ್ಲಿ ಕೆಲವು ಸಮಸ್ಯೆಗಳನ್ನು ಒಡ್ಡುತ್ತದೆ.

ಉದಾಹರಣೆಗೆ, ತಮಿಳಿನಲ್ಲಿ ಮೂರು ಲಿಂಗಗಳಿವೆ– ಸ್ತ್ರೀಲಿಂಗ, ಪುಲ್ಲಿಂಗ ಹಾಗೂ ನಪುಂಸಕಲಿಂಗ ಎಂದು. ಆದರೆ ಹಿಂದಿಯಲ್ಲಿ ಎರಡೇ ಲಿಂಗಗಳಿವೆ.

ತಮಿಳಿನಲ್ಲಿ ಪ್ರತಿ ಲಿಂಗಕ್ಕೆ ಸಂಬಂಧಿಸಿದಂತೆ ಕ್ರಿಯಾಪದಗಳ ರೂಪಗಳನ್ನು ಉಪಯೋಗಿಸಲಾಗುತ್ತದೆ:

ಅವನ್ ಪೋರಾನ್ – ಅವನು ಹೋಗುತ್ತಾನೆ – ವಹ್ ಜಾತಾ ಹೈ

ಅವಳ್ ಪೋರಾಳ್ – ಅವಳು ಹೋಗುತ್ತಾಳೆ – ವಹ್ ಜಾತಿ ಹೈ

ಅದು ಪೋರದು – ಅದು ಹೋಗುತ್ತದೆ – ಇದಕ್ಕೆ ಹಿಂದಿಯಲ್ಲಿ ಬೇರೆಯ ಕ್ರಿಯಾಪದಗಳಿಲ್ಲ.

ತಮಿಳನ್ನೇ ಮಾತನಾಡುವ ಪರಿವಾರದಿಂದ ಬಂದ ಮಗು ದಿಗ್ಭ್ರಮೆಗೊಳಗಾಗುತ್ತದೆ! ಮೇಜು ಇಲ್ಲವೆ ಕುರ್ಚಿಯನ್ನು ಯಾವ ಲಿಂಗಕ್ಕೆ ಸೇರಿಸುವುದು? ಇದು ಸ್ತ್ರೀಲಿಂಗವೇ ಅಥವಾ ಪುಲ್ಲಿಂಗವೇ? ತಮಿಳಿನಲ್ಲಿ ಮೇಜು ಹಾಗೂ ಕುರ್ಚಿ ನಪುಂಸಕಲಿಂಗಕ್ಕೆ ಸೇರಿದೆ. ಆದರೆ ಹಿಂದಿಯಲ್ಲಿ ಕುರ್ಸಿ ಸ್ತ್ರೀಲಿಂಗ

ಹಾಗೂ ಮೇಜ಼್ ಪುಲ್ಲಿಂಗವಾಗಿದೆ ಎಂದು ನನ್ನ ತಾತ ಹೇಳುತ್ತಿದ್ದದ್ದು ನೆನಪಾಗುತ್ತದೆ:

ರೇಲ್ ಗಾಡಿ ರೋಜ಼್ ಸುಬಹ್ ಸಮಯ್ ಪರ್ ಆತಿ ಹೈ ಪರ್ ಶಾಮ್ ಕೋ ಪತಾ ನಹೀ ಕ್ಯೋ ದೇರ್ ಸೇ ಆತಾ ಹೈ?

ಇದರ ನೇರ, ಅಕ್ಷರಶ: ಅನುವಾದ ಹೀಗಿರುತ್ತದೆ:

'ರೈಲುಗಾಡಿ ಬೆಳಗ್ಗೆ ಸರಿಯಾದ ಸಮಯಕ್ಕೆ ಬರುತ್ತಾಳೆ.

ಆದರೆ ಯಾಕೋ ತಿಳಿಯದು ಸಂಜೆ ತಡವಾಗಿ ಬರುತ್ತಾನೆ.

ಲಿಂಗದ ಬಗ್ಗೆ ನನ್ನ ತಾತನಿಗಿದ್ದ ಆ ಗೊಂದಲವನ್ನು ಅವರಿಗೆ ತಿಳಿಯುವಂತೆ ಪರಿಹರಿಸಲು ಸಾಧ್ಯವಾಗುತ್ತಿರಲಿಲ್ಲ. ಆದರೆ ನನ್ನ ತಾತ ಮತ್ತು ಅಜ್ಜಿ ಎಲ್ಲ ಲಿಂಗಗಳನ್ನು ಬೆರೆಸಿ ಮಾತನಾಡುವುದನ್ನು ಕೇಳಲು ಮಜವಾಗಿರುತ್ತಿತ್ತು. ಆದರೆ ನಮ್ಮ ವಿದ್ಯಾರ್ಥಿಗಳು ಹಾಗೆ ಮಾಡಿದಾಗ ನಾವು ನಗುವುದು ಸರಿಯಲ್ಲ. ಬದಲಿಗೆ ಅವರಿಗೆ ಭಾಷೆಯ ನಿಯಮಗಳನ್ನು ಸರಿಯಾಗಿ ಕಲಿಸಬೇಕು. ಎಲ್ಲ ಭಾರತೀಯ ಭಾಷೆಗಳನ್ನು ನಾವು ಕಲಿಯಬೇಕು/ಕಲಿಸಬೇಕು ಎಂದು ನಾನಿಲ್ಲಿ ಹೇಳುತ್ತಿಲ್ಲ. ಆದರೆ ಆಯಾ ಪ್ರದೇಶಗಳಲ್ಲಿ ಅಥವಾ ಆಯಾ ತರಗತಿಗಳಲ್ಲಿ ಹೆಚ್ಚಾಗಿ ಮಾತನಾಡುವ ಭಾಷೆಯನ್ನು ವಿದ್ಯಾರ್ಥಿಗಳಿಗೆ ಕಲಿಸಬೇಕು ಹಾಗೂ ಇಂಗ್ಲಿಷನ್ನೂ ಸಹ ಅದರೊಡನೆ ಕಲಿಸಬೇಕು.

ನನ್ನ ತಂದೆ ಹೇಳಿದ ಇನ್ನೊಂದು ದೃಷ್ಟಾಂತವನ್ನು ಇಲ್ಲಿ ಹೇಳಲು ಬಯಸುತ್ತೇನೆ. ಅವರಿಗೊಬ್ಬ ಬಂಗಾಳಿ ಸ್ನೇಹಿತರಿದ್ದರು. ತರಬೇತಿಯ ಅನಂತರ ಅವರುಗಳನ್ನು ವಿಭಿನ್ನ ಕೆಲಸದ ಸ್ಥಳಗಳಿಗೆ ನೇಮಕ ಮಾಡಲಾಯಿತು. ಸ್ವಲ್ಪ ಸಮಯದ ಅನಂತರ ಅವರಿಬ್ಬರೂ ಭೇಟಿಯಾದರು. ಆಗ ನನ್ನ ತಂದೆ ಅವರ ಕಛೇರಿಯ ಬಗ್ಗೆ ಕೇಳಿದರು. ಅದಕ್ಕವರು ಎಲ್ಲವೂ ಸರಿಯಾಗಿದೆ, ಅವರಲ್ಲಿ ಯಾವ ಘೋಡಾ ಇಲ್ಲವೆ ಘೋಡಿ ಇಲ್ಲವೆಂದು ಹೇಳಿದರು.

ನನ್ನ ತಂದೆಗಿದು ಪರಮಾಶ್ಚರ್ಯ! ಗುಮಾಸ್ತನೊಬ್ಬನಿಗೆ ಕಛೇರಿಯಲ್ಲಿ ಘೋಡಾ (ಗಂಡು ಕುದುರೆ) ಇಲ್ಲವೆ ಘೋಡಿ (ಹೆಣ್ಣು ಕುದುರೆ) ಏಕೆ ಬೇಕು? ನಿಮ್ಮಲ್ಲಿ ಕೆಲವರು ಈಗಾಗಲೇ ಊಹಿಸಿರುವಂತೆ ಅವರು ಘೋಡಾ ಅಲ್ಲ ಘಢ (ಮಡಕೆ), ಘಡಿ ಅಂದರೆ ಗಡಿಯಾರ ಎಂದು ಹೇಳಲು ಹೊರಟಿದ್ದರು.

ಇದೊಂದು ಉತ್ತಮ ಉದಾಹರಣೆಯಾಗಿದ್ದರೂ ಸಹ, ಪ್ರಾಥಮಿಕ ತರಗತಿಗಳಲ್ಲಿ ಇದು ಅನ್ವಯಿಸುವುದಿಲ್ಲ. ತರಗತಿಯಲ್ಲಿ ಇಂತಹ ಸಂದರ್ಭಗಳು ಕೈಮೀರಿ ಹೋಗದ ಹಾಗೆ ನಾವು ನೋಡಿಕೊಳ್ಳಬೇಕು. ಇಲ್ಲವಾದರೆ ವಿದ್ಯಾರ್ಥಿಗಳಲ್ಲಿರುವ ವಿಶ್ವಾಸವನ್ನು ನಾವು ನಾಶಪಡಿಸುತ್ತೇವೆ. ಪ್ರತಿಯೊಬ್ಬರಿಗೂ

ಅವರ ಮಾತೃಭಾಷೆ ಪ್ರಿಯವಾದುದು. ಬಹುಪಾಲು ಮಕ್ಕಳು ಹಾಗೂ ಪೋಷಕರು ಅವರವರ ಭಾಷೆಯ ವಿಚಾರದಲ್ಲಿ ಸೂಕ್ಷ್ಮಮತಿಗಳಾಗಿರುತ್ತಾರೆ.

ಕೆಲವು ಮೂಲಭೂತ ಕ್ರಮಗಳು

- ಒಬ್ಬ ಸಮರ್ಥ ಶಿಕ್ಷಕರಿಗೆ ಒಂದು ವಾರದೊಳಗೆ ತನ್ನ ತರಗತಿಯಲ್ಲಿರುವ ವಿದ್ಯಾರ್ಥಿಗಳೆಲ್ಲರ ಮಾತೃಭಾಷೆ ಯಾವುವು ಎಂದು ತಿಳಿದಿರಬೇಕು. ಸಾಧಾರಣವಾಗಿ ಆ ತರಗತಿಯಲ್ಲಿ ೪-೫ ಭಾಷಾ ಗುಂಪುಗಳು ಇರುತ್ತವೆ. ಇದರ ಪಟ್ಟಿಯೊಂದನ್ನು ಮಾಡಿಕೊಳ್ಳುವುದು ಒಳ್ಳೆಯದು.
- ಎಲ್ಲ ಮಕ್ಕಳಿಗೂ ಜೋರಾಗಿ ಓದಲು/ಮಾತನಾಡಲು ಹೇಳುವುದು. ಯಾವ ಪದ/ಅಕ್ಷರಕ್ಕೆ ನಿಮ್ಮ ಗಮನ ಕೊಡಬೇಕೆಂದು ಬರೆದಿಟ್ಟುಕೊಳ್ಳುವುದು.
- ಮಕ್ಕಳನ್ನು ಮಾತೃಭಾಷೆ ಆಧಾರಿತವಾಗಿ ಗುಂಪುಗಳನ್ನಾಗಿ ವಿಂಗಡಿಸುವುದು. ಉದಾ: ೫ ಮರಾಠಿ, ೬ ಸ್ಥಳೀಯ ಭಾಷೆ, ೯ ಹಿಂದಿ ಮಾತನಾಡುವ ಮಕ್ಕಳು, ಇತ್ಯಾದಿ.
- ಸಾಂದರ್ಭಿಕವಾಗಿ, ಮಕ್ಕಳೊಂದಿಗೆ ಮಾತನಾಡುತ್ತ, ಪಠ್ಯದಲ್ಲಿ ಬರುವ ಸರಳ ಪದಗಳಿಗೆ ಅವರ ಭಾಷೆಯಲ್ಲಿ ಸಮಾನಾರ್ಥಕ ಪದಗಳು ಯಾವುವೆಂದು ಕೇಳಿಕೊಳ್ಳುವುದು. ಉದಾ: "ಕುರ್ಚಿಗೆ ನಿಮ್ಮ ಭಾಷೆಯಲ್ಲಿ ಏನು ಹೇಳುತ್ತಾರೆ?'

ಒಂದು ಪದ ಸ್ತ್ರೀಲಿಂಗ ಇಲ್ಲವೆ ಪುಲ್ಲಿಂಗ ಅಥವಾ ನಪುಂಸಕಲಿಂಗಕ್ಕೆ ಸೇರಿದೆಯೇ ಎಂದು ಕೇಳುವುದು. ಇದಕ್ಕೆ ಮಕ್ಕಳ ವಯಸ್ಸನ್ನು ಪರಿಗಣಿಸಬೇಕಾಗುತ್ತದೆ. ಅಂದರೆ, ಒಂದನೇ ತರಗತಿಯಲ್ಲಿ ನೀವು ಹೀಗೆ ಕೇಳಬಹುದು: ಕುರ್ಸಿ ಛೋಟಿ ಹೈ ಕೀ ಛೋಟಾ? ('ಕುರ್ಚಿ ಚಿಕ್ಕದಾಗಿದ್ದಾಳೆ' ಎನ್ನುವುದು ಸರಿಯೋ ಅಥವಾ ಚಿಕ್ಕದಾಗಿದ್ದಾನೆ ಸರಿಯೋ?) ಪೇಡ್ ಊಂಚಾ ಹೈ ಕೀ ಊಂಚೀ? (ಮರ ಎತ್ತರವಾಗಿದ್ದಾಳೆ ಎನ್ನುವುದು ಸರಿಯೋ ಅಥವಾ ಮರ ಎತ್ತರವಾಗಿದ್ದಾನೆ ಸರಿಯೋ?

> ಯಾವುದೇ ಭಾಷೆಯನ್ನು ಜನಪ್ರಿಯಗೊಳಿಸುವುದು ಪರಸ್ಪರವಾದ ರೀತಿಯಲ್ಲಿಯೇ ಆಗಬೇಕಾಗಿದೆ. ನಾನು ನಿನ್ನ ಭಾಷೆಯನ್ನು ಕಲಿತು ಅದನ್ನು ಗೌರವಿಸುತ್ತೇನೆ. ಹಾಗೆಯೇ ನೀನು ನನ್ನ ಭಾಷೆಯನ್ನು ಕಲಿತು ಅದನ್ನು ಗೌರವಿಸಬೇಕು! ಇದು ಅಷ್ಟು ಸುಲಭವಾದದ್ದು! ಬಹುಭಾಷಾ

ಪರಿಸರದ ಬಡಾವಣೆಗಳಲ್ಲಿರುವ ಮಕ್ಕಳನ್ನು ನೋಡಿ. ಅವರು ೩–೫ ಭಾಷೆಗಳನ್ನು ಯಾವುದೇ ಪ್ರಯಾಸವಿಲ್ಲದೆ ಕಲಿಯುತ್ತಾರೆ ಹಾಗೂ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಸರಾಗವಾಗಿ ಬದಲಾಯಿಸಿಕೊಂಡು ಮಾತನಾಡುತ್ತಾರೆ.

ಮಕ್ಕಳಿಗೆ ಈ ಪ್ರಶ್ನೆಗಳನ್ನು ಕೇಳುವುದರಿಂದ ಇದನ್ನು ಕುರಿತು ಅವರು ಯೋಚಿಸುವಂತೆ ಪ್ರೇರಣೆಯಾಗುತ್ತದೆ. ಇಂಗ್ಲಿಷಿನಲ್ಲಿ ನಾಮಪದದ ಲಿಂಗವು ಬದಲಾದಂತೆ ಗುಣವಾಚಕಗಳಲ್ಲಿ ಬದಲಾಗುವುದಿಲ್ಲ.

೯ನೇ ತರಗತಿಯಲ್ಲೂ ತಮಿಳು, ಮಲಯಾಳಂ ಹಾಗೂ ಮರಾಠಿ ಮಾತನಾಡುವ ಮಕ್ಕಳಿಗೆ ಹಿಂದಿಯಲ್ಲಿ ಸರಿಯಾದ ರೀತಿಯಲ್ಲಿ ಲಿಂಗಗಳನ್ನು ಬಳಸಲು ಕಲಿಸುವುದು ನನಗೆ ಕಷ್ಟವಾಯಿತು. ಕಾರಣ ಅವರು ತಮ್ಮ ತಮ್ಮ ಮಾತೃಭಾಷೆಗೆ ಅನ್ವಯವಾಗುವ ಭಾಷಾ ನಿಯಮಗಳನ್ನು ಬೆರೆಸಿಬಿಡುತ್ತಿದ್ದರು.

ನನ್ನ ವಿದ್ಯಾರ್ಥಿಗಳಲ್ಲಿ ಬೇರೆ ಭಾಷೆಯನ್ನು ಕುರಿತಾಗಿ ಗೌರವ ಹುಟ್ಟುವಂತೆ ಮಾಡಲು ನಾನು ಸಾಕಷ್ಟು ಪ್ರಯತ್ನಗಳನ್ನು ಮಾಡುತ್ತಿದ್ದೆ. ನನ್ನ ಮಾತೃಭಾಷೆಯನ್ನು ನನ್ನೆದುರೇ ಅಣಕಿಸುವಷ್ಟು ಅವರಿಗೆ ಧೈರ್ಯವಿರದಿದ್ದರೂ, ನಾನು ಈ ವಿಚಾರವನ್ನು ಅವರ ಮುಂದಿಡುತ್ತಿದ್ದೆ. ದಕ್ಷಿಣ ಭಾರತದ ಭಾಷೆಗಳ ಬಗ್ಗೆ ಜನರಲ್ಲಿರುತ್ತಿದ್ದ ವಿಚಿತ್ರ ಅನಿಸಿಕೆಗಳ ಬಗ್ಗೆ ಅವರು ಮಾತನಾಡುವಂತೆ ಮಾಡುತ್ತಿದ್ದೆ. ಕೆಲವು ಗಂಡು ಮಕ್ಕಳು ಮೆಲ್ಲಗೆ, 'ಇಡ್ಲಿ ದೋಸಾ' ಎಂದೋ ಇಲ್ಲವೆ 'ಅಯ್ ಅಯ್ಯಯೋ' ಎಂದೋ ಹೇಳಿಬಿಡುತ್ತಿದ್ದರು. ಈ ಪದಗಳನ್ನು ಹಿಂದಿ ಸಿನಿಮಾಗಳಲ್ಲಿ ಆಗಾಗ ಬಳಸಿದ್ದನ್ನು ನೋಡಿ, ತಮಿಳಿಗರು ಇಷ್ಟೇ ಪದಗಳನ್ನು ಬಳಸುತ್ತಾರೆ ಎಂದು ಅವರು ತಿಳಿದಿರುತ್ತಿದ್ದರು! ಒಮ್ಮೆ ಬಹಳ ಕೋಪಕ್ಕೊಳಗಾದವಳಂತೆ ನಟಿಸಿ, ತಮಿಳನಲ್ಲಿರುವ ಶ್ರೀಮಂತ ಸಾಹಿತ್ಯದ ಬಗ್ಗೆ ಮಾತನಾಡಿದೆ. ಹಿಂದಿ ಹಾಗೂ ತಮಿಳಿಗಿರುವ ಪದ ಬಳಕೆಯ ಸಾಮ್ಯತೆಯ ಕುರಿತಾಗಿ ಹೇಳಿ, ತಮಿಳಿನ ಸಂಸ್ಕೃತಿ ಹಾಗೂ ಸಮೃದ್ಧ ಲಲಿತ ಕಲೆಗಳ ಕುರಿತಾಗಿ ಅವರಿಗೆ ತಿಳಿಸಿದೆ.

ಯಾವುದೇ ಭಾಷೆಯನ್ನು ಜನಪ್ರಿಯಗೊಳಿಸುವುದು ಪರಸ್ಪರವಾದ ರೀತಿಯಲ್ಲಿಯೇ ಆಗಬೇಕಾಗಿದೆ. ನಾನು ನಿನ್ನ ಭಾಷೆಯನ್ನು ಕಲಿತು ಅದನ್ನು ಗೌರವಿಸುತ್ತೇನೆ. ಹಾಗೆಯೇ ನೀನು ನನ್ನ ಭಾಷೆಯನ್ನು ಕಲಿತು ಅದನ್ನು ಗೌರವಿಸಬೇಕು! ಇದು ಅಷ್ಟು ಸುಲಭವಾದದ್ದು! ಬಹುಭಾಷಾ ಪರಿಸರದ ಬಡಾವಣೆಗಳಲ್ಲಿರುವ ಮಕ್ಕಳನ್ನು ನೋಡಿ; ಅವರು ೩–೫ ಭಾಷೆಗಳನ್ನು ಯಾವುದೇ ಪ್ರಯಾಸವಿಲ್ಲದೆ ಕಲಿಯುತ್ತಾರೆ ಹಾಗೂ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ

ಸರಾಗವಾಗಿ ಬದಲಾಯಿಸಿಕೊಂಡು ಮಾತನಾಡುತ್ತಾರೆ. ನನ್ನ ಇಬ್ಬರು ಮಕ್ಕಳು ಸಹ ಮಧ್ಯಪ್ರದೇಶ ಹಾಗೂ ಮಹಾರಾಷ್ಟ್ರದ ಗಡಿ ಪ್ರದೇಶದಲ್ಲಿದ್ದ ಕಾರಣ ಹಿಂದಿ, ತಮಿಳು ಹಾಗೂ ಇಂಗ್ಲಿಷ್ ಅಲ್ಲದೆ ಸ್ವಲ್ಪ ಉರ್ದು ಹಾಗೂ ಸಾಕಷ್ಟು ಮರಾಠಿಯನ್ನು ಕೂಡ ಕಲಿತರು. ದ್ವಿಭಾಷಿಕ/ಬಹುಭಾಷಿಕ ಪೋಷಕರ ಮಕ್ಕಳಾಗಿರುವುದು ಸಹ ಮಕ್ಕಳಿಗೆ ಬಹುಭಾಷೆಯನ್ನು ಕಲಿಯುವುದಕ್ಕೆ ಸಹಕಾರಿಯಾಗುತ್ತದೆ.

ದ್ವಿಭಾಷಿಕತೆ/ಬಹುಭಾಷಿಕತೆಯನ್ನು ಪ್ರೋತ್ಸಾಹಿಸುವ ಯೋಜನೆಗಳು/ ಚಟುವಟಿಕೆಗಳು

ಮಕ್ಕಳು ಮಾತನಾಡುವ ವಿವಿಧ ಭಾಷೆಗಳಲ್ಲಿ ಬಳಸಲಾಗುವ ಈ ಕೆಳಗಿನ ಅಂಶಗಳನ್ನು ಸಂಗ್ರಹಿಸುವುದು:

- ಸ್ವಾಗತ ಕೋರಲು ಬಳಸುವ ಪದಗಳು
- ಕುಟುಂಬದ ಸದಸ್ಯರೊಡನೆ ಹೊಂದಿರುವ ಸಂಬಂಧ ಸೂಚಕ ಪದಗಳು ಹಾಗೂ ಅದರಲ್ಲಿರುವ ಸಾಮ್ಯತೆಗಳು
- ಮಾತೃಭಾಷೆಯ ಅಕ್ಷರಮಾಲೆ
- ದಿನನಿತ್ಯ ಬಳಸುವ ಪದಗಳು. ಅಂದರೆ ತರಕಾರಿ, ಹಣ್ಣು, ದಿನಸಿ ಪದಾರ್ಥಗಳ ಹೆಸರುಗಳ ಪಟ್ಟಿ.

ತರಗತಿಗಳಲ್ಲಿ ಆಡಿಸಬಹುದಾದ ಆಟಗಳು:

೧. ನಾವು ಈ ಆಟವನ್ನು ನಮ್ಮ ಬಾಲ್ಯದಲ್ಲಿ ಬೇಸಿಗೆ ರಜೆಯ ಸಮಯದಲ್ಲಿ ಆಡುತ್ತಿದ್ದೆವು. ಎಲ್ಲರೂ ಸೇರಿ ಒಂದು ಅಕ್ಷರವನ್ನು ಆಯ್ಕೆ ಮಾಡಿಕೊಂಡು, ಆ ಅಕ್ಷರದಿಂದ ಪ್ರಾರಂಭವಾಗುವ ಪದ/ಹೆಸರುಗಳನ್ನು ಬರೆಯುತ್ತಿದ್ದೆವು. ಉದಾ 'ನ'. 'ನ'ದಿಂದ ನರೇಂದ್ರ – ಹುಡುಗನ ಹೆಸರು, ನೀತ – ಹುಡುಗಿಯ ಹೆಸರು, ನಾಗಪುರ – ನಗರದ ಹೆಸರು, ನಾಕ್ – ಹಿಂದಿಯಲ್ಲಿ ಮೂಗು (ದೇಹದ ಭಾಗ), ನಮಕ್– ಹಿಂದಿಯಲ್ಲಿ ಉಪ್ಪು (ಪದಾರ್ಥದ ಹೆಸರು), ನವರಂಗ್– ಸಿನಿಮಾ ಹೆಸರು, ನಾರಂಗಿ – ಹಿಂದಿಯಲ್ಲಿ ಕಿತ್ತಳೆ ಹಣ್ಣು, ನಾಚ್ನಾ– (ಹಿಂದಿಯಲ್ಲಿ ನೃತ್ಯ ಮಾಡುವುದು) – ಕ್ರಿಯಾಪದ, ಇತ್ಯಾದಿ.

ಹೀಗೆಯೇ ಒಂದು ಅಕ್ಷರವನ್ನು ಆರಿಸಿಕೊಂಡು ಪ್ರತಿ ಮಗುವೂ ತನ್ನ ಮಾತೃಭಾಷೆಯಲ್ಲಿ ಆ ಅಕ್ಷರದಿಂದ ಪ್ರಾರಂಭವಾಗುವ ಒಂದು ಪದವನ್ನು

ಬರೆಯಲು ಹೇಳಬಹುದು. ಈ ರೀತಿಯ ಚಟುವಟಿಕೆಗಳಿಂದ ಮಗುವಿನ ಪದಸಂಪತ್ತಿನ ಬೆಳವಣಿಗೆಗೆ, ಅಕ್ಷರಗಳನ್ನು ಗುರುತಿಸುವುದಕ್ಕೆ ಹಾಗೂ ಪದಗಳನ್ನು ಅನೇಕ ವಿಭಾಗಗಳನ್ನಾಗಿ ವರ್ಗೀಕರಣ ಮಾಡುವುದಕ್ಕೆ ನೆರವಾಗುತ್ತದೆ.

೨. ಸಾಮಾನ್ಯವಾಗಿ ತಪ್ಪಾಗಿ ಉಚ್ಚರಿಸಲಾಗುವ ಅಕ್ಷರಗಳನ್ನು ಇಲ್ಲವೆ ೨–೩ ಭಾಷೆಗಳಲ್ಲಿ ಉಚ್ಚಾರಣೆಯಲ್ಲಿ ಸಾಮ್ಯತೆ ಇರುವ ಶಬ್ದಗಳನ್ನು ತೆಗೆದುಕೊಳ್ಳುವುದು. ಆದರೆ ಆ ಅಕ್ಷರಗಳಿರುವ ಪದಗಳ ನಡುವೆ ಅರ್ಥ ವ್ಯತ್ಯಾಸವಿರಲಿ. ಉದಾ: ಜ ಹಾಗೂ ಜ಼. ಅನೇಕ ಪರ್ಶಿಯನ್ ಹಾಗೂ ಅರೇಬಿಕ್ ಭಾಷೆಗಳ ಶಬ್ದ/ಪದಗಳು ಹಾಗೂ ಕೆಲವು ಇಂಗ್ಲಿಷ್ ಪದಗಳು ಹಿಂದಿ ಭಾಷೆಯಲ್ಲಿ ಸೇರಿಕೊಂಡಿವೆ.

ಅಂಥ ಒಂದು ಉದಾಹರಣೆ 'ಜ಼' ಶಬ್ದದಲ್ಲಿದೆ. ಈ ಶಬ್ದವು ಉರ್ದು ಹಾಗೂ ಇಂಗ್ಲಿಷಿನಲ್ಲಿ ಸೇರಿಕೊಂಡಿದೆ. ಹಿಂದಿಯಲ್ಲೂ ಸಹ 'ಜ಼' ಶಬ್ದ ಇದೆ, ಹಾಗೂ ಸುಶಿಕ್ಷಿತರಾದವರೂ ಸಹ 'ಜ಼' ಅನ್ನು 'ಜ' ಎಂದು ಉಚ್ಚರಿಸುತ್ತಾರೆ:

ಮುಂದೆ, ಒಂದೇ ರೀತಿ ಇರುವಂತೆ ಕೇಳಿಸುವ ನಾಮಪದಗಳ ಹೆಸರುಗಳನ್ನು ಸಂಗ್ರಹಿಸಿ ಆ ಪದಗಳ ನಡುವೆ ಇರುವ ಅರ್ಥ ವ್ಯತ್ಯಾಸವನ್ನು ವಿವರಿಸಬಹುದು. ಈ ಕೆಳಗಿನ ಪದಗಳನ್ನು ಬಳಸಿ ವಾಕ್ಯಗಳನ್ನು ರಚಿಸುವಂತೆ ಮಕ್ಕಳಿಗೆ ಹೇಳಬಹುದು:

ಜ಼ರಾ – Zara - a little – ಸ್ವಲ್ಪ

ಜರಾ – Jara - old age – ಮುಪ್ಪು

ಜ಼ಮಾನ– Zamana - a particular period – ಒಂದು ನಿರ್ದಿಷ್ಟ ಕಾಲಘಟ್ಟ

ಜಮಾನ– Jamana - to curdle – ಹೆಪ್ಪು ಹಾಕುವುದು

೩. ಬಹಳಷ್ಟು ಆಸಕ್ತಿಯನ್ನು ಕೆರಳಿಸಬಲ್ಲ ಚಟುವಟಿಕೆ ಎಂದರೆ, ಒಂದೇ ರೀತಿಯ ಉಚ್ಚಾರಣೆ ಇರುವ, ಆದರೆ ಬೇರೆ ಬೇರೆ ಭಾಷೆಗಳಲ್ಲಿ ವಿಭಿನ್ನ ಅರ್ಥವಿರುವ ಪದಗಳನ್ನು ಹುಡುಕಲು ಮಕ್ಕಳಿಗೆ ಹೇಳುವುದು. ಉದಾ:

- More – ಇಂಗ್ಲಿಷಿನಲ್ಲಿ ಈ ಪದದ ಅರ್ಥ ಹೆಚ್ಚು ಎಂದು, ಹಿಂದಿಯಲ್ಲಿ 'ನವಿಲು' ಹಾಗೂ ತಮಿಳಿನಲ್ಲಿ ಮಜ್ಜಿಗೆ ಎಂಬುದು ಈ ಪದದ ಅರ್ಥಗಳಾಗಿವೆ.
- Hii - HE– ಇದು ಇಂಗ್ಲಿಷ್ ಹಾಗೂ ಮರಾಠಿಯಲ್ಲಿ ಅವನು ಎಂಬ

ಪುಲ್ಲಿಂಗ ಸರ್ವನಾಮವಾಗಿದ್ದರೆ, ಹಿಂದಿಯಲ್ಲಿ ಇದು 'ಮಾತ್ರ' ಎಂಬ ಅರ್ಥದಲ್ಲಿ ಉಪಯೋಗವಾಗುತ್ತದೆ. ಅಥವಾ ಪ್ರಾಮುಖ್ಯವನ್ನು ತೋರಲು ಒತ್ತಿ ಹೇಳಬೇಕಾದಾಗ ಉಪಯೋಗಿಸುವ ಕ್ರಿಯಾ ವಿಶೇಷಣ ಪದವಾಗಿ ಬಳಕೆಯಾಗುತ್ತದೆ.

ಇಂತಹ ಹಲವಾರು ಪದಗಳನ್ನು ಭಾರತೀಯ ಭಾಷೆಗಳಲ್ಲಿ ಗುರುತಿಸಬಹುದು. ಅವುಗಳಿಗೆ ಹೊಂದುವ ಹಾಗೆ ಸಣ್ಣ ಕಥೆಗಳನ್ನೋ ಇಲ್ಲವೆ ಹಾಸ್ಯಮಯ ಪ್ರಸಂಗಗಳನ್ನೋ ರಚಿಸಬಹುದು. ಹೀಗೆ ಬಹುಭಾಷಿಕತೆ ಎಂಬುದನ್ನು ಒಂದು ಅದ್ಭುತ ಸಂಪನ್ಮೂಲವಾಗಿ ವಿಭಿನ್ನ ರೀತಿಗಳಲ್ಲಿ ಬಳಸಬಹುದಲ್ಲವೇ? ಇದನ್ನು ಮಾಡುವ ಮನಸ್ಸು, ಒಲವು ನಮಗಿದ್ದರೆ, ಇದು ಕಷ್ಟದ ಕೆಲಸವೇನಲ್ಲ! ಭಾಷೆಗಳನ್ನು ಹೀಗೆ ಒಗ್ಗೂಡಿಸುವ ಮೂಲಕ ದೇಶದ ಐಕ್ಯ ಹಾಗೂ ಒಗ್ಗಟ್ಟನ್ನು ಬಲಪಡಿಸುವ ಜೊತೆ ಜೊತೆಯಲ್ಲಿಯೇ ನಿಮ್ಮ ವಿದ್ಯಾರ್ಥಿಗಳ ಹೃದಯಗಳಲ್ಲಿ ನೀವೊಂದು ಸ್ಥಾನವನ್ನೂ ಪಡೆಯಬಲ್ಲಿರಿ!

* * *

ಚಿಂತನಾತ್ಮಕ ಪ್ರಶ್ನೆಗಳು:

೧. ಪ್ರಾಥಮಿಕ ಹಂತದ ತರಗತಿಗಳಲ್ಲಿರುವ ಮಕ್ಕಳೊಡನೆ ಶಿಕ್ಷಕಿಯೊಬ್ಬರು ಮಕ್ಕಳ ಮಾತೃಭಾಷೆಯಲ್ಲಿ ಮಾತನಾಡುವುದು ಲಾಭದಾಯಕವಾಗಿರುತ್ತದೆ. ಏಕೆ?

೨. ಕೇಂದ್ರೀಯ ಪಠ್ಯಕ್ರಮದ ಶಾಲೆಗಳಲ್ಲಿ ಮಕ್ಕಳು ಒಂದಕ್ಕಿಂತ ಹೆಚ್ಚಿಗೆ ಭಾಷೆಗಳನ್ನು ತಿಳಿದಿರುತ್ತಾರೆ. ಈ ಲೇಖನದಲ್ಲಿ ನೀಡಲಾದ ಉದಾಹರಣೆಯನ್ನು ವಿಸ್ತರಿಸಿ. ಭಾರತದಲ್ಲಿರುವ ಈ ಸನ್ನಿವೇಶದ ಚಿತ್ರಣವನ್ನು ನೀವು ತಿಳಿದಿರುವ ಸಮಾಜದ ಸನ್ನಿವೇಶ ಮತ್ತು ನಿಮ್ಮ ಅನುಭವದ ಮೇಲಿಂದ ವಿವರಿಸಿ.

೩. ಬಹುಭಾಷಿಕತೆಯು ಒಂದು ಸಂಪನ್ಮೂಲ ಎಂಬುದನ್ನು ಕುರಿತು ನಿಮ್ಮ ಚಿಂತನೆಯನ್ನು ವಿವರಿಸಿ. ತರಗತಿಯೊಂದರಲ್ಲಿ ಇರುವ ಭಾಷಾ ವೈವಿಧ್ಯವನ್ನು ಭಾಷಾ ಕಲಿಕೆಯ ಸಂಪನ್ಮೂಲವಾಗಿ ಉಪಯೋಗಿಸಬಹುದು. ಹೇಗೆ?

ಆಶಾ ಅಯ್ಯರ್: ಅಲಿಯಾಸ್ ಆಯಿಶಾ ಬೀ ಹಿಂದಿಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಸಣ್ಣಕಥೆಗಳ ಬರಹಗಾರ್ತಿ ಹಾಗೂ ಅನುವಾದಕಿಯಾದ ಇವರು ಪಿಜಿಟಿ ಹಿಂದಿ ಅಧ್ಯಾಪಕಿಯಾಗಿ ಹಾಗೂ ಕೇಂದ್ರೀಯ ವಿದ್ಯಾಲಯಗಳಲ್ಲಿ ಉಪ ಪ್ರಾಂಶುಪಾಲಕರಾಗಿ ಸೇವೆ ಸಲಿಸಿದ್ದಾರೆ. ಇವರನ್ನು asha.yunus52@gmai.com. ಇಲ್ಲಿ ಸಂಪರ್ಕಿಸಿ.

ಅನುವಾದ: ಉಷಾ ಬಿ ಎನ್ / **ಪರಿಶೀಲನೆ:** ರಾಜಗೋಪಾಲ್

ಮೂಲ: *Language and Language Teaching*, Volume 1 Number 2 July 2012.